# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 162, ಗಿರಿನಗರ, ಬೆಂಗಳೂರು

## ನವೆಂಬರ್- 2021ರ ಮಾಹೆಯ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

***********

ಉಲ್ಲೇಖ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21,
ದಿನಾಂಕ: 22-09-2021.

******

ದಿನಾಂಕ: 10-11-2021
ಸ್ಥಳ : ವಾರ್ಡ್ ಕಛೇರಿ, ಸ್ವಾಮಿ ವಿವೇಕನಂದ ಉದ್ಯಾನವನ, ಗಿರಿನಗರ
ಸಮಯ : ಪೂರ್ವಾಹ್ನ 11.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಸುನಿಲ್‌ಕುಮಾರ್.ಪಿ | ಮಾನ್ಯ ಮುಖ್ಯ ನಗರ ಯೋಜಕರು ಹಾಗೂ ನೋಡಲ್ ಅಧಿಕಾರಿಗಳು |
| 2 | ಶ್ರೀ ಶ್ರೀಧರ್ ಕೋಟ್ರೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-162, ಗಿರಿನಗರ |
| 3 | ಶ್ರೀ ಜನಾರ್ಧನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು.ಗಿರಿನಗರ ಉಪವಿಭಾಗ |
| 4 | ಡಾ, ಅಶ್ವಿನಿ.ಡಿ | ವೈದ್ಯಾಧಿಕಾರಿಗಳು ,ವಾರ್ಡ್ ನಂ-162 ಗಿರಿನಗರ |
| 5 | ಡಾ, ದೀಕ್ಷಾ | ಕೋವಿಡ್-19, ವೈದ್ಯಾಧಿಕಾರಿಗಳು,ವಾರ್ಡ್ ನಂ-162 ಗಿರಿನಗರ |
| 6 | ಶ್ರೀ ಶ್ರೀಲಕ್ಷ್ಮಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 162 |
| 7 | ಶ್ರೀ ಬಿ.ವಿ ಸುರೇಶ್ | ಹೆಡ್ ಕಾನ್ಸ್‌ಟೇಬಲ್,ಗಿರಿನಗರ ಪೋಲೀಸ್ ಠಾಣೆ |
| 8 | ಶ್ರೀ ಶಿವರಾಮ್ | ಕಿರಿಯ ಕಂದಾಯ ಪರಿವೀಕ್ಷಕರು. |
| 9 | ಶ್ರೀ.ಎಸ್.ಎಮ್ ಆರ್.ಪ್ರಸಾದ್ | ವಾರ್ಡ್ ಸಮಿತಿ ಸದಸ್ಯರು ವಾರ್ಡ್ ನಂ-162 ಗಿರಿನಗರ |

ಮಾನ್ಯ ಮುಖ್ಯ ನಗರ ಯೋಜಕರು, ಬೆಂಗಳೂರು ಮಹಾನಗರ ಪಾಲಿಕೆ, ಆದ ಶ್ರೀ ಸುನಿಲ್‌ಕುಮಾರ್.ಪಿ ರವರು ಗಿರಿನಗರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಯಾಗಿ ಹಾಜರಿದ್ದ, ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಗಿರಿನಗರ ವಾರ್ಡ್‌ನಲ್ಲಿ ವಿವಿಧ ಕೆಲಸಗಳ ಮೇಲೆ ನಿಗಾ ವಹಿಸಲು ಹಾಗೂ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲು ಅನುವಾಗಲು ವಾಟ್ಸ್‌ಪ್ ಗ್ರೂಪ್‌ನ್ನು ಸಹಾಯಕ ಅಭಿಯಂತರರು ಸೃಜಿಸಿರುವುದರಿಂದ ಪರಿಸ್ಥಿತಿ ಸುಧಾರಿಸಿದೆ ಎಂದು ಸಭೆಗೆ ತಿಳಿಸಿದರು..

2. ವಾರ್ಡ್‌ನಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಬಿ.ಬಿ.ಎಂ.ಪಿ ವತಿಯಿಂದ ಎಷ್ಟು ಅಳವಡಿಸಿದೆ ಮತ್ತು ಎಷ್ಟು ಸಿಸಿಟಿವಿಗಳನ್ನು ಅಳವಡಿಸಲು ಸ್ಥಳ ಗುರುತಿಸಲಾಗಿದೆ ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಮುಂದಿನ ಸಭೆಯಲ್ಲಿ ಅದರ ಮಾಹಿತಿಯನ್ನು ತಿಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

3. ಗಿರಿನಗರ ವಾರ್ಡ್-162ರ ವ್ಯಾಪ್ತಿಯಲ್ಲಿನ ರಸ್ತೆ ಬದಿಯಲ್ಲಿ ಬರುವ ಮರಗಳನ್ನು ಟ್ರಿಮ್ ಮಾಡಲು ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ಸಂಬಂಧಪಟ್ಟ ಬಸವನಗುಡಿಯ ಅರಣ್ಯ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸುವಂತೆ ತಿಳಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.
4. ವರ್ಕ್ ಇನ್ಸ್‌ಪೆಕ್ಟರ್ ಮತ್ತು ಗ್ಯಾಂಗ್‌ಮೆನ್ ಹುದ್ದೆಗಳು ಖಾಲಿ ಇದ್ದು ವಾರ್ಡ್ ಕೆಲಸ ಕಾರ್ಯಗಳಿಗೆ ಅವುಗಳು ಅವಶ್ಯಕತೆ ಇರುವುದರಿಂದ ಹುದ್ದೆಗಳನ್ನು ಭರ್ತಿ ಮಾಡಲು ಬಿ.ಬಿ.ಎಂ.ಪಿ ಯ ನೇಮಕಾತಿ ಮತ್ತು ವಿಚಾರಣೆ ವಿಭಾಗಕ್ಕೆ ಪತ್ರದ ಮುಖೇನ ಮೇಲಾಧಿಕಾರಿಗೆ ಹೊರ ಗುತ್ತಿಗೆ ಮೇಲೆ ತೆಗೆದುಕೊಳ್ಳುವ ಬಗ್ಗೆ ಪತ್ರ ಬರೆದು ಕ್ರಮ ಕೈಗೊಳ್ಳಲು ತಿಳಿಸಿದರು.
5. ಗಿರಿನಗರ ವಾರ್ಡ್‌ಲ್ಲಿ ನಲವತ್ತಾರು ಸಾವಿರ ಜನಸಂಖ್ಯೆ (46,000) ಇದ್ದು ಅದರಲ್ಲಿ ಬಿ.ಡಿ.ಎ ಲೇಔಟ್ ಒಂದರಲ್ಲಿ ವ್ಯಾಕ್ಸಿನೇಶನ್ ಹಾಕುವುದು ಬಾಕಿ (pending) ಇರುತ್ತದೆ. ಅದರ ಬಗ್ಗೆ ವಾರ್ಡ್ ಕಮಿಟಿಯಲ್ಲಿ ಚರ್ಚಿಸಿದ್ದು ಮುಂದಿನ ದಿನಗಳಲ್ಲಿ ಯಾವುದೇ ಬಾಕಿ ಇರದಂತೆ ವಾರ್ಡ್ ಸದಸ್ಯರ ನೆರವಿನೊಂದಿಗೆ ವ್ಯಾಕ್ಸಿನೇಶನ್ ಹಾಕಬೇಕೆಂದು ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.
6. ಗಿರಿನಗರ ವಾರ್ಡ್‌ನಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಿದ್ದು ಅವುಗಳಿಂದ ಜನಸಾಮಾನ್ಯರು, ಮಕ್ಕಳಿಗೆ ಮತ್ತು ಪಿ.ಹೆಚ್.ಸಿ ಸಿಬ್ಬಂದಿಗೂ ತುಂಬಾ ತೊಂದರೆಯಾಗಿದೆ ಎಂದು ವೈದ್ಯರು ತಿಳಿಸಿದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಹಾಗೂ ಸಂಬಂಧಪಟ್ಟ ಇಲಾಖೆಯವರಿಗೆ ಕೂಡಲೇ ಕ್ರಮವಹಿಸುವಂತೆ ಸೂಚಿಸಲು ತೀರ್ಮಾನಿಸಲಾಯಿತು..
7. ವಾರ್ಡ್ ವ್ಯಾಪ್ತಿಯಲ್ಲಿ ಸುಮಾರು 7400 ಆಸ್ತಿಗಳು ಇದ್ದು ತಿಂಗಳಿಗೆ 2 ಕೋಟಿ ಮಾತ್ರ ತೆರಿಗೆ ಹಣ ಸಂಗ್ರಹ ವಾಗುವುದಾಗಿ ಕಂದಾಯ ಪರಿವೀಕ್ಷಕರು ತಿಳಿಸಿರುತ್ತಾರೆ. ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ಸಂಬಂಧಪಟ್ಟ ಮಾಲೀಕರುಗಳಿಗೆ ನೋಟೀಸ್ ಜಾರಿ ಮಾಡುವುದರೊಂದಿಗೆ ಈ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಬೆಸ್ಕಾಂ ನವರಿಗೂ ವಿಷಯ ತಿಳಿಸಲು ಕಂದಾಯ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.
8. ಗಿರಿನಗರ ವಾರ್ಡ್‌ನಲ್ಲಿ ಕಸದ ವಿಲೇವಾರಿ ಬಗ್ಗೆ ಕುರಿತು ಚರ್ಚಿಸಲಾಯಿತು ಸಾರ್ವಜನಿಕರಲ್ಲಿ ಒಣ ಕಸ ಮತ್ತು ಹಸಿ ಕಸವನ್ನು ಮೂಲದಲ್ಲಿ ಬೇರ್ಪಡಿಸಿ ನೀಡವ ಬಗ್ಗೆ ಕ್ರಮ ಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.
9. BESCOM,BWSSB,SWD,BMTC,TRAFFIC ಮತ್ತು HORTICULTURE ವಿಭಾಗಗಳ ಅಧಿಕಾರಿಗಳು ಸಭೆಗೆ ಹಾಜರಾಗಿರುವುದಿಲ್ಲ ಆದ್ದರಿಂದ ಅವರಿಗೆ ನೋಟಿಸ್ ನೀಡಲು ಹಾಗೂ ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ಹಾಜರಿರುವಂತೆ ಕ್ರಮಕೈಗೊಳ್ಳಲು ಮಾನ್ಯ ಅಧ್ಯಕ್ಷರು ಸೂಚಿಸಿದರು.
10. ಗಿರಿನಗರ ವಾರ್ಡ್‌ನಲ್ಲಿ ಅಲ್ಲಲ್ಲಿ ಬಿದ್ದಿರುವ ಮಣ್ಣು ಮತ್ತು Debris ತೆಗೆಯುವಂತೆ ಸಭೆಯಲ್ಲಿ ಚರ್ಚಿಸಲಾಯಿತು ಮತ್ತು ವಾರ್ಡ್‌ನ್ನು ಸ್ವಚ್ಛವಾಗಿಡಬೇಕೆಂದು ಮಾನ್ಯ ಅಧ್ಯಕ್ಷರು ಸೂಚಿಸಿದರು.
11. ಕಸವನ್ನು ಕಾಂಪ್ಯಾಕ್ಟರ್ (compactor) ಗಳಿಗೆ ತುಂಬಲು ಸುತ್ತಮುತ್ತ ಮನೆಗಳಿಲ್ಲದ ಖಾಲಿ ಜಾಗವೊಂದನ್ನು ವಾರ್ಡ್ ಸಮಿತಿ ಸದಸ್ಯರಾದ ಶ್ರೀ.ಎಸ್.ಎಮ್.ಆರ್.ಪ್ರಸಾದ್ ರವರು ಸೂಚಿಸಿದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸದರಿ ಜಾಗದ ಸೂಕ್ತತೆಯನ್ನು ಮುಂದಿನ ಸಭೆಯಲ್ಲಿ ತಿಳಿಸಲು ಅಧ್ಯಕ್ಷರು ಸೂಚಿಸಿದರು.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ, ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 162, ಗಿರಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 162, ಗಿರಿನಗರ

ಪ್ರತಿಯನ್ನು:

1.ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2.ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3.ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
4.ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5.ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
6.ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7.ಕಾರ್ಯಪಾಲಕ ಅಭಿಯಂತರರು.ಬಸವನಗುಡಿ ರವರ ಅವಗಾಹನೆಗೆ ಸಲ್ಲಿಸಿದೆ.
8.ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9.ಕಛೇರಿ ಪ್ರತಿ.